ಖಂಡ -1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1999ರ ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕ, 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

+ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕದಲ್ಲಿ ಈ ಹಿಂದೆ ದೊಡ್ಡದೊಡ್ಡ ಕೈಗಾರಿಕೆಗಳು ಮೆಗಾ ಪ್ರಾಜೆಕ್ಟ್ಸ್‌ಗಳಿಗೆ 100ಕ್ಕೆ 100ರಷ್ಟು ಸ್ಟ್ಯಾಂಪು ಡ್ಯೂಟಿ ಮನ್ನಾ ಮಾಡತಕ್ಕಂತಹ ಅವಕಾಶವಿತ್ತು. ಇನ್‌ಫ್ರಾಸ್ಟ್ರಕ್ಚರ್ ಪಾಲಿಸಿನಲ್ಲಿ ಸ್ಟಾಂಪು ಡ್ಯೂಟಿಯನ್ನು ಮನ್ನಾ ಮಾಡಬೇಕೆಂದು ಒಪ್ಪಿಕೊಂಡಿರುವುದರಿಂದ ಇದಕ್ಕೆ ತಿದ್ದುಪಡಿಯನ್ನು ತಂದು 1998ರ ಹಿಂದೆ ಯಾವಯಾವ ಪ್ರಾಜೆಕ್ಟ್‌ಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ ಆ ಪ್ರಾಜೆಕ್ಟ್‌ಗಳಿಗೆ ಸ್ಟಾಂಪು ಡ್ಯೂಟಿಯನ್ನು ಮನ್ನಾ ಮಾಡುತ್ತೇವೆಂದು ಒಪ್ಪಿಕೊಂಡಿದ್ದೇವೆ.

ಅಂತಹ ಕೈಗಾರಿಕೆಗಳಿಗೆ ಸ್ಟಾಂಪು ಡ್ಯೂಟಿ ಮನ್ನಾ ಮಾಡುತ್ತೇವೆಂದು ಒಪ್ಪಿಕೊಂಡಿರುವುದರಿಂದ ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತರಲಾಗಿದೆ.

SRI MALLIKARJUNA KHARGE (Leader of Opposition) : It is stated in the Financial Memorandum, "By the proposed amendment, there will be loss of revenue to the State Government by way of reduction or remission of stamp duty to the extent of about Rs. Thirty five crores for the year 1999-2000 and forty crores for the next three years. ಅಂದರೆ 120 ಕೋಟಿ ರೂಪಾಯಿಗಳು ಮತ್ತು 35 ಕೋಟಿ ರೂಪಾಯಿಗಳು ಸೇರಿ ಹೆಚ್ಚು ಕಡಿಮೆ 155 ಕೋಟಿ ರೂಪಾಯಿಗಳ ರೆಮಿಷನ್ ಅನ್ನು ಮತ್ತು ರಿಡಕ್ಷನ್ ಅನ್ನು ನಾವು ಈ ಮೆಗಾ ಪ್ರಾಜೆಕ್ಟ್‌ಗಳಿಗೆ ಕೊಡುತ್ತಿದ್ದೇವೆ. ಮೊದಲ ಬಾರಿಗೆ ಈ ರೀತಿಯಾಗಿ ಸ್ಟ್ಯಾಂಪ್ ಡ್ಯೂಟಿ ಎಕ್ಸೆಂಪ್‌ಷನ್ ಅನ್ನು ತಂದಿದ್ದೀರಿ. ಇದಕ್ಕೂ ಹಿಂದೆ ಸರ್ಕಾರದವರು ಅನೇಕ ಮೆಗಾ ಪ್ರಾಜೆಕ್ಟ್‌ಗಳಿಗೆ ಅಪ್ರೂವಲ್ ಕೊಟ್ಟಿದ್ದಾರೆ. ಆದರೆ ಆಗ ಯಾವ ಅಮೆಂಡ್‌ಮೆಂಟ್ ಕೂಡ ಇರಲಿಲ್ಲ. ಕೆಲವು ಪ್ರಕರಣಗಳಲ್ಲಿ ಮಾತ್ರ ನಮ್ಮ ಮಾನ್ಯ ಅರ್ಥ ಸಚಿವರು, ಸಬ್ಸಿಡಿ ಅಥವಾ ಸೇಲ್ಸ್ ಟ್ಯಾಕ್ಸ್ ರಿಲ್ಯಾಕ್ಸೇಷನ್ ಅಥವಾ ಎಲೆಕ್ಟ್ರಿಸಿಟಿ ರಿಲ್ಯಾಕ್ಸೇಷನ್ ಇಂಥವುಗಳನ್ನು ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ ಕೊಟ್ಟಿದ್ದಿದೆ. ಆದರೆ ಇಲ್ಲಿ ತಾವು ಮೊದಲ ಬಾರಿಗೆ ಮೆಗಾ ಪ್ರಾಜೆಕ್ಟ್‌ಗಳಿಗೆ ಸ್ಟ್ಯಾಂಪ್ ಡ್ಯೂಟಿಯನ್ನು ಎಕ್ಸೆಂಪ್‌ಷನ್ ಮಾಡುತ್ತಿದ್ದೀರಿ. ಇವು ದೊಡ್ಡ ದೊಡ್ಡ ಇಂಡಸ್ಟ್ರೀಗಳು. ಯಾರ ಹತ್ತಿರ 1000 ಕೋಟಿ ರೂಪಾಯಿಗಳು, 500 ಕೋಟಿ ರೂಪಾಯಿಗಳು, 200 ಕೋಟಿ ರೂಪಾಯಿಗಳು, 100 ಕೋಟಿ ರೂಪಾಯಿಗಳಿಗೂ ಮೀರಿ ಬಂಡವಾಳ ಇರುತ್ತದೆ ಅಂಥವು ಮೆಗಾ ಪ್ರಾಜೆಕ್ಟ್‌ಗಳು. 100 ಕೋಟಿ ರೂಪಾಯಿಗಳಿಗೂ ಕಡಿಮೆ ಇರುವುದಿಲ್ಲ. ಈ ಸ್ಟ್ಯಾಂಪ್ ಡ್ಯೂಟಿ ಎನ್ನುವುದು ಅವರಿಗೆ ಒಂದು ಸಣ್ಣ ಅಮೌಂಟ್ ಇದ್ದ ಹಾಗೆ. ಅವರಿಗೆ ಅದನ್ನು ಎಕ್ಸೆಂಪ್‌ಷನ್ ಕೊಡಲು ಈ ತಿದ್ದುಪಡಿಯನ್ನು ಮಾಡುತ್ತಿದ್ದೀರಿ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳಿಗೆ ಇದನ್ನು ಕೊಡುವುದಿಲ್ಲ, ಸಣ್ಣ ರೈತರಿಗೆ ಕೊಡುವುದಿಲ್ಲ. ಸಣ್ಣ ರೈತರು ಈಗಾಗಲೇ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಬೆಟರ್‌ಮೆಂಟ್ ಹಣ ಕೊಡಬೇಕಾಗಿದೆ. ಈ ರೀತಿ ದೊಡ್ಡ ಇಂಡಸ್ಟ್ರೀಗಳಿಗೆ ಎಕ್ಸೆಂಪ್‌ಷನ್ ಕೊಟ್ಟರೆ ಖಂಡಿತವಾಗಿ ಇದರಿಂದ ನಮಗೆ ಒಳ್ಳೆಯ ಹೆಸರು ಬರುವುದಿಲ್ಲ.

ಅಧ್ಯಕ್ಷರು : ಅದು ಅವರ ಉದ್ದೇಶವಾಗಿರಲಿಕ್ಕಿಲ್ಲ. ಅವರು ಆಮೇಲೆ ಈ ಬಗ್ಗೆ ಎಕ್ಸ್‌ಪ್ಲೈನ್ ಮಾಡುತ್ತಾರೆ. ತಾವು ಹೇಳಿ.

ಶ್ರೀ ಬಿ. ಸೋಮಶೇಖರ್ : ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳಿಗೆ ನಾವು 100ಕ್ಕೆ 100ರಷ್ಟು ಎಕ್ಸೆಂಪ್‌ಷನ್ ಕೊಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸೋಮಶೇಖರ್‌ರವರೇ, ತಾವು ಆಮೇಲೆ ಎಕ್ಸ್‌ಪ್ಲೈನ್ ಮಾಡಿ. "Under Section 9 of the Karnataka Stamp Act 1957. State Government has power to reduce or remit upto fifty percent of the stamp duty. It is considered

necessary to provide full exemption from stamp duty on any instrument executed in respect of transaction by or in favour of infrastructure projects, certain Mega projects and any Social Service Projects as may be notified by the Government from time to time". ಈ ಒಂದು ಅಮೆಂಡ್‌ಮೆಂಟನ್ನು ತಂದು ಸೆಕ್ಷನ್ 9ಕ್ಕೆ ನೀವು ಈ ರೀತಿಯಾಗಿ ಫುಲ್ ಪವರ್ ಕೊಟ್ಟರೆ ನಾಳೆ ಆದು ಪೂರ್ಣವಾಗಿ ಮಿಸ್‌ಯೂಸ್ ಆಗತಕ್ಕಂಥ ಸಂದರ್ಭ ಹೆಚ್ಚು ಇದೆ. ಇವತ್ತು ನೀವು ಇರಬಹುದು, ನಾಳೆ ಹೋಗಬಹುದು. ಆದರೆ ಇದರಿಂದ ನಾಳೆ ಏನಾಗುತ್ತದೆ ಎಂದರೆ ಕಾರ್ಯದರ್ಶಿಗಳಾಗಲೀ ಅಥವಾ ಮುಂದೆ ಬರತಕ್ಕಂಥ ಯಾವುದೇ ಸರ್ಕಾರದವರೂ ಇದನ್ನೇ ಮುಂದುವರೆಸುತ್ತದೆ. I repeat: "it is considered necessary to provide full exemption from stamp duty on any instrument executed in respect of transaction by or in favour of infrastructure projects.

MR. SPEAKER : What is it precisely that the Government wants? Let us know.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಶೇ. 50ರಷ್ಟು ಮತ್ತು ಫುಲ್ ಎಕ್ಸೆಂಪ್‌ಷನ್ ಎರಡಕ್ಕೂ ಪ್ರಾವಿಷನ್ ಇದೆ. ಇದರಿಂದ ಮಿಸ್‌ಯೂಸ್ ಆಗತಕ್ಕಂಥಾದ್ದು ಆಗುತ್ತದೆ. ನಾಳೆ ಯಾರಾದರೂ ಬಂದು, ಇದರಿಂದ ನಿಮಗೆ 10 ಕೋಟಿ ರೂಪಾಯಿಗಳು ಉಳಿಯುತ್ತದೆ, ಒಂದು ಕೋಟಿ ರೂಪಾಯಿಗಳನ್ನು ಕೊಡಿ, ಕೆಲಸ ಮಾಡಿಸಿಕೊಳ್ಳಿ ಎನ್ನುವ ಹಾಗೆ ಆಗುವ ಸಾಧ್ಯತೆ ಇದೆ. ಅದಕ್ಕಾಗಿ ನಾನು ಹೇಳುತ್ತೇನೆ, ಈ ಮೆಗಾ ಪ್ರಾಜೆಕ್ಟ್‌ಗಳಿಗೆ ಎಕ್ಸೆಂಪ್‌ಷನ್ ಕೊಡಬಾರದು. ಅವರಿಗೆ ಎಕ್ಸೆಂಪ್‌ಷನ್ ಕೊಟ್ಟರೆ, ಅವರು ಈ ಪ್ರಾಜೆಕ್ಟ್ ಕಾಸ್ಟ್‌ನಲ್ಲೇ ಅದನ್ನು ಸೇರಿಸಿಕೊಳ್ಳುತ್ತಾರೆ, 100 ಕೋಟಿ ರೂಪಾಯಿಗಳು ಇದ್ದ ಪ್ರಾಜೆಕ್ಟನ್ನು 104 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಎಂದು ಮಾಡಿಕೊಳ್ಳುತ್ತಾರೆ. ಇವರಲ್ಲಿ ಲೋನ್ ತೆಗೆದುಕೊಂಡು, ಸರ್ಕಾರೀ ಗ್ಯಾರಂಟಿ ತೆಗೆದುಕೊಂಡು ಬರತಕ್ಕಂಥವರು ಬಹಳ ಜನ. ಅಂಥವರಿಗೆ ನೀವು ಎಕ್ಸೆಂಪ್‌ಷನ್ ಕೊಡುವುದರಲ್ಲಿ ಏನು ಪುರುಷಾರ್ಥ ಇದೆ? ಏನು ಅರ್ಥ ಇದೆ? It does not serve any purpose.

MR. SPEAKER : What is the intention of the Government? Please let us know. Kindly convince the House.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, 1996ರಲ್ಲಿ ಈ ಇಂಡಸ್ಟ್ರೀಯಲ್ ಪಾಲಿಸಿ ಬಂತು. ಆ ಇಂಡಸ್ಟ್ರೀಯಲ್ ಪಾಲಿಸಿಯಲ್ಲಿ, ರಾಜ್ಯಗಳಲ್ಲಿ ಇಂಡಸ್ಟ್ರೀಯಲ್ ಗ್ರೋತ್ ಆಗಬೇಕಾದರೆ ಆಯಾ ರಾಜ್ಯ ಸರ್ಕಾರಗಳು ಯಾವಯಾವ ರೀತಿಯ ಕನ್ಸಿಷನ್‌ಗಳನ್ನು ಕೊಡಬಹುದೋ ಅದನ್ನು ಸರ್ಕಾರದವರು ಮಾಡಬೇಕು ಎಂದು ಇತ್ತು. ಕೆಲವು ರಾಜ್ಯಗಳವರು ಇಂಡಸ್ಟ್ರೀಗಳಿಗೆ 100ಕ್ಕೆ 100ರಷ್ಟು ಸ್ಟ್ಯಾಂಪ್ ಡ್ಯೂಟಿ ಎಕ್ಸೆಂಪ್‌ಷನ್ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ 100ಕ್ಕೆ 100ರಷ್ಟು ಸ್ಟ್ಯಾಂಪ್ ಡ್ಯೂಟಿ ಎಕ್ಸೆಂಪ್‌ಷನ್ ಮಾಡಿದ್ದೇವೆ. 1998ಕ್ಕೂ ಹಿಂದೆ ಸರ್ಕಾರ

ಇಂಥ ಪ್ರಾಜೆಕ್ಟ್‌ಗಳಿಗೆ ಸ್ಯಾಂಕ್ಷನ್ ಕೊಡುವಾಗ 100ಕ್ಕೆ ಶೇ. 50ರಷ್ಟು ಎಕ್ಸೆಂಪ್‌ಷನ್ ಕೊಡತಕ್ಕಂಥ ಅಧಿಕಾರವಿತ್ತು. ಹೋದಸಾರಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಇದನ್ನು ತಂದಾಗ, ನಾವು ಈ ಕ್ಸೆಂಪ್‌ಷನ್ ಅನ್ನು ತೆಗೆಯಬೇಕು ಎನ್ನುವ ಒಂದು ಪ್ರಸ್ತಾವನೆ ಬಂತು. ಆದರೆ 1998ಕ್ಕೂ ಹಿಂದೆ ನಾವು ಒಪ್ಪಿಕೊಂಡು ಮಂಜೂರಾತಿ ಕೊಟ್ಟಿರತಕ್ಕಂಥ ಪ್ರಾಜೆಕ್ಟ್‌ಗಳಿಗೆ ಈಗ ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕು ಎಂದರೆ ಅವರಿಗೆ ತೊಂದರೆಯಾಗುತ್ತದೆ. ಇದು ಈಗಾಗಲೇ ಕಮಿಟ್‌ಮೆಂಟ್ ಆಗಿರತಕ್ಕಂಥಾದ್ದು. ಅದಕ್ಕೆ ಎಕ್ಸೆಂಪ್‌ಷನ್ ಮಾಡಬೇಕು ಎನ್ನುವ ಉದ್ದೇಶದಿಂದ ನಾವು ಇದನ್ನು ತಂದಿದ್ದೇವೆ. ಹೊಸದಾಗಿ ಬೇರೇನೂ ಉದ್ದೇಶವಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ತಾವು ಇದನ್ನು ರೆಟ್ರಾಸ್ಪೆಕ್ಟೀವ್ ಆಗಿ ಎಫೆಕ್ಟ್ ಕೊಡುತ್ತಿದ್ದೀರೇನು? ಇವು 1996-97ರಲ್ಲಿ ಆಗಿಹೋಗಿರತಕ್ಕಂಥ ಟ್ರಾನ್ಸ್‌ಸ್ಯಾಕ್ಷನ್‌ಗಳು. ತಾವು ಎಕ್ಸ್‌ಪ್ಲೈನ್ ಮಾಡಬೇಕಾದರೆ 1996-97ರಲ್ಲಿ ಇಂಡಸ್ಟ್ರೀಯಲ್ ಪಾಲಿಸಿ ಪ್ರಕಾರ .....

MR. SPEAKER : There appears to be some confusion.

ಶ್ರೀ ಕೆ.ಎಸ್. ಈಶ್ವರಪ್ಪ : ಇದರಲ್ಲಿ ಅನಗತ್ಯವಾಗಿ ತುಂಬಾ ಗೊಂದಲವಿದೆ. ಇದರಲ್ಲಿ ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. 35 ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದೀರಿ. 'ಕೆಲವು ಬೃಹತ್ ಯೋಜನೆಗಳು ಮತ್ತು ಸಮಾಜ ಸೇವಾ ಯೋಜನೆಗಳ ಮೂಲಕವಾಗಿ' ..... ಎಂದು ಇದೆ. ಅದು ಯಾವುದು? ಸ್ಪೆಸಿಫಿಕ್ ಆಗಿ ಯಾವುದೋ ಇದೆ, ಅದು ಯಾವುದು ಎನ್ನುವುದನ್ನು ನಮ್ಮ ಮುಂದಿಡಿ, ಇಲ್ಲಿ ಚರ್ಚೆ ಮಾಡಿ ಆ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳೋಣ. ಮಾನ್ಯ ಅಧ್ಯಕ್ಷರೇ, ದಯವಿಟ್ಟು ಇದನ್ನು ಸೋಮವಾರ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು, ಮಾನ್ಯ ಈಶ್ವರಪ್ಪನವರ ಸಲಹೆಯನ್ನು ನಾನು ಒಪ್ಪಿದ್ದೇನೆ. ಈ ಮಸೂದೆಯನ್ನು ಸೋಮವಾರ ತೆಗೆದುಕೊಳ್ಳಲಾಗುವುದು.

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ, 1999

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು